# ಈತ ಮುಖ್ಯಪ್ರಾಣನಾಥ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
2. **Note:** Singer has followed these lyrics.

ರಾಗ: ಬೇಹಾಗು          ತಾಳ: ಅಟ್ಟ

ಈತ ಮುಖ್ಯಪ್ರಾಣನಾಥ    ॥ ಪ ॥
ಈತ ಶ್ರೀ ರಾಮ ಸೇವಕನೆನಿಸಿದಾತ    ॥ ಅಪ ॥

ಭಾನುವಿನ ತುಡುಕಿದಾತ ಭಾರತಕೆ ಬಂದಾತ
ವಾನರೋತ್ತಮ ಹನುಮ ಹರಿ ಶರಣನೀತ    ॥ ೧ ॥

ವಾರಿಧಿಯ ನೆಗೆದಾತ ವನಚರಾಗ್ರೇಸರನೀತ
ವಾರಿಜಾಕ್ಷಿಗೆ ಮುದ್ರಿಕೆ ವಹಿಸಿ ಇತ್ತಾತ    ॥ ೨ ॥

ಲಂಕಿಣಿಯ ಗೆಲಿದಾತ ಲಂಕೆಯನು ಉರಿಸಿದಾತ
ಪಂಕಜೋದ್ಭವನ ಪಟ್ಟಭದ್ರ ನೀತ    ॥ ೩ ॥

ವಾನರೋತ್ತಮ ನೀತ ವಸುಧೆಗೆ ವೆಗ್ಗಳನೀತ
ದಾನವಾಂತಕ ಹನುಮ ದಶಪ್ರಮತಿಯೀತ    ॥ ೪ ॥

ಸ್ಮರನಂಬು ಗೆಲಿದಾತ ಶರಣ ಜನರಿಗೆ ದಾತ
ಸಿರಿ ಪುರಂದರ ವಿಠ್ಠಲಗೆ ಅಚ್ಚಿನ್ನ  ಭಕ್ತನೀತ    ॥ ೫ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಭಾನುವಿನ ತುಡುಕಿದಾತ** – ಮಗುವಾಗಿರುವಾಗ ಸೂರ್ಯನನ್ನು ಹಣ್ಣೆಂದು ಬಗೆದು ಸೂರ್ಯಮಂಡಲಕ್ಕೆ ಹಾರಿದವನು.

**ಭಾರತಕ್ಕೆ ಬಂದಾತ** – ಮಹಾಭಾರತ ಯುದ್ಧದಲ್ಲಿ ಭೀಮನಾಗಿ ಪಾಲುಗೊಂಡವನು.

**ವಾರಿಧಿಯ ನೆಗೆದಾತ** – ಸೀತೆಯನ್ನು ಹುಡುಕುತ್ತ ಸಮುದ್ರವನ್ನು ಜಿಗಿದವನು.

**ವನಚರಾಗ್ರೇಸರ** – ಕಾಡಿನಲ್ಲಿ ಅಲೆದಾಡುವ ವಾನರರಲ್ಲಿ ಮುಂದಾದವನು.

**ವಾರಿಜಾಕ್ಷಿಗೆ** – ಸೀತೆಗೆ.

**ಪಂಕಜೋದ್ಭವನ...** – ಮುಂಬರುವ ಕಲ್ಪದಲ್ಲಿ ಹನುಮಂತನು ಬ್ರಹ್ಮ ಪಟ್ಟ (ಪಂಕಜೋದ್ಭವ ಪಟ್ಟ)ವನ್ನು ಪಡೆಯುವನೆಂದು ನಂಬಿಕೆ.

**ವೆಗ್ಗಳ** – ಹಿರಿಯ.

**ದಶಪ್ರಮತಿ** – ಮಧ್ವಾಚಾರ್ಯರ ಹೆಸರುಗಳಲ್ಲೊಂದು ನಂಬಿಕೆ.

**ಸ್ಮರನಂಬು ಗೆಲಿದಾತ** – ಸ್ಮರನೆಂದರೆ ಮನ್ಮಥ, ಅವನ ಬಾಣ (ಅಂಬು) ಎಂದರೆ ಮೋಹ; ಇದನ್ನು ಗೆದ್ದವನು; ನೈಷ್ಠಿಕ ಬ್ರಹ್ಮಚಾರಿ.

**ಅಚ್ಛಿನ್ನ** – ಎಡೆಬಿಡದ.

**Classification:** Keerthane
**Ankita:** siri purandara vittala
**Location:** NA
**Category:** Hanuma Stuti
**Sub-Category:** hanuma, rama, surya, bharata, Krishna, sharana, Samudra, kaadu, lanka, mudre, sita, bhumi, asura, jana,
**Pravachana:** NA
**Explanation:** NA